**ಕೆರೆಗೋಡು** : 1. ಹುಲಿವಾನದಿಂದ ಕೀಲಾರ ರಸ್ತೆ ಅಭಿವೃದ್ಧಿ 2.00 ಕಿಮೀ. 24.00 ಲಕ್ಷ

**ನಾಗಮಂಗಲ** : 1. ಬೆಂಗಳೂರು–ಮಂಗಳೂರು ರಸ್ತೆಯಿಂದ ಮಾಯಸಂದ್ರ ರಸ್ತೆ ಅಭಿವೃದ್ಧಿ 3.86 ಕಿಮೀ. 25.00 ಲಕ್ಷ

2. ನಾಗಮಂಗಲದಿಂದ ಮೈಲಾರ ಪಟ್ಟಣ ರಸ್ತೆ ಅಭಿವೃದ್ಧಿ 3.90 ಕಿಮೀ. 25.00 ಲಕ್ಷ

**ಮದ್ದೂರು** : ಕೊಪ್ಪದಿಂದ ಕೋಣಸಾಲೆ 3.50 ಕಿಮೀ 25.00 ಲಕ್ಷ ಬದಲಿ ಪ್ರಸ್ತಾವನೆ ಸಲ್ಲಿಸಲಾಗಿದೆ.

**ಮಂಡ್ಯ** : ಮಂಡ್ಯ – ಬೀರನಹಳ್ಳಿ–ತಗ್ಗವಳ್ಳಿ ರಸ್ತೆ 2.20 ಕಿಮೀ 27.20 ಕಿಮೀ. 27.50 ಲಕ್ಷ –ಅದೇ–

**ಸೇಡಂ ತಾಲ್ಲೂಕಿನ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ**

4498 (5129) : ಶ್ರೀ ಬಸವಂತರೆಡ್ಡಿ ಮೇತಕಪಲ್ಲಿ (ಸೇಡಂ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು; ಈ ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು; (ಪ್ರೌಢ ಶಾಲಾವಾರು ವಿವರ ನೀಡುವುದು);

ಆ) ಹಿಂದುಳಿದ ಈ ಕ್ಷೇತ್ರದ ಒಂದೊಂದು ಪ್ರೌಢ ಶಾಲೆಯಲ್ಲಿ 1–2 ಶಿಕ್ಷಕರು ಇದ್ದು ವಿದ್ಯಾರ್ಥಿಗಳ ವಿದ್ಯಾಭ್ಯಾಸವೇ ಆಗದೇ ಶಿಕ್ಷಣ ರಂಗದಲ್ಲಿ ಮೊದಲೇ ಹಿಂದುಳಿದಿರುವ ಈ ಭಾಗವನ್ನು ಇನ್ನೂ ಹಿಂದುಳಿಯುವಂತೆ ಮಾಡುವ ವ್ಯವಸ್ಥೆ ಇದೆಯಲ್ಲವೆ.

ಇ) ಈಗಲಾದರೂ ಸಹ ಕೂಡಲೇ ಪ್ರೌಢ ಶಾಲಾ ಶಿಕ್ಷಕರನ್ನು ನೇಮಿಸಿ ಈ ಗಡೀಪ್ರಾಂತ್ಯ ಭಾಗದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗುವುದೆ;

ಪೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ : 24,
ಪ್ರಾಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ. : 107
(ಶಾಲಾವಾರು ಪಟ್ಟಿ ಲಗತ್ತಿಸಿದೆ)

ಆ) ಖಾಲಿಯಿರುವ ಹುದ್ದೆಗಳಿಗೆ ನಿವೃತ್ತಿ ಶಿಕ್ಷಕರನ್ನು ಸಂಭಾವನೆ ಮೇಲೆಗೆ ನೇಮಿಸಿಕೊಳ್ಳಲಾಗುತ್ತಿದೆ. ಹಾಗು ಬಿ.ಇ.ಡಿ. ಪದವಿ ಹೊಂದಿರುವ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ತಾತ್ಕಾಲಿಕವಾಗಿ ನಿಯೋಜಿಸಿಕೊಂಡು ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ.

ಇ) ಸರ್ಕಾರಿ ಪ್ರೌಢ ಶಾಲೆಗಳಲ್ಲಿರುವ ಖಾಲಿ ಹುದ್ದೆಗಳನ್ನು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲಾಗುವುದು.

**ಚಿತ್ತಾಪುರ ತಾಲ್ಲೂಕಿನ ಅಳ್ಳಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ದುರಸ್ತಿ**

4499 (5130) : ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಅಳ್ಳಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ದುರಸ್ತಿಗಾಗಿ 2000–01, 2001–02 ಸಾಲಿನಲ್ಲಿ ಮಂಜೂರಾಗಿರುವ ಹಣ ಎಷ್ಟು?

ಆ) ಇದರಲ್ಲಿ ಖರ್ಚಾಗಿರುವ ಹಣ ವೆಷ್ಟು? ವರ್ಷವಾರು ಕೆಲಸವಾರು ವಿವರ ಒದಗಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಯಾವುದೇ ಹಣ ಮಂಜೂರಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

**ಚಿತ್ತಾಪುರ ತಾಲ್ಲೂಕಿನ ತಾಂಡಗಳ ಸಿಸಿ ರಸ್ತೆಗಳು**

4500 (5131) : ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪೂರ ತಾಲ್ಲೂಕಿನ ಬೆಳಗೇರಾ ಗ್ರಾಮದ ಹಿರಾಮಣಿ ತಾಂಡಾ ಹಾಗೂ ಹಾಬಾನಾಯಕ್ ತಾಂಡ ಮತ್ತು ಭೀಮನಾಯ್ಕ ತಾಂಡಾಗಳಲ್ಲಿ ಸಿಸಿ ರಸ್ತೆಗಳನ್ನು ನಿರ್ಮಾಣ ಮಾಡಿರುವುದು ನಿಜವಲ್ಲವೆ;

2) ಈ ಸಿಸಿ ರಸ್ತೆಗಳು ನಿರ್ಮಿಸಿರುವುದು ಯಾವಾಗ; ಮತ್ತು ಇವುಗಳಿಗೆ ತಗಲಿರುವ ಖರ್ಚು ಎಷ್ಟು; (ಕಾಮಗಾರಿವಾರು ವಿವರ ನೀಡುವುದು)

3) ಈ ರಸ್ತೆಗಳು ಸುಸ್ಥಿತಿಯಲ್ಲಿದ್ದು ಸಂಚಾರಕ್ಕೆ ಯೋಗ್ಯವಿದೆಯೆ; ಇಲ್ಲದಿದ್ದರೆ ಏಕೆ ಇದರ ಜವಾಬ್ದಾರರು ಯಾರು; ಇವರ ಮೇಲೆ ಕೈಗೊಳ್ಳುವ ಕ್ರಮವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ಹೌದು. ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಬರುವ ಸೇಡಂ ಮತಕ್ಷೇತ್ರಕ್ಕೆ ಸೇರಿದ ಬೇಳಗೇರಾ ಗ್ರಾಮದ ಹಿರಾಮಣಿ ತಾಂಡಾದ ಕೂಡು ರಸ್ತೆಗೆ ಮಾತ್ರ 100 ಮೀಟರ್ ಸಿ.ಸಿ. ರಸ್ತೆಯನ್ನು ನಿರ್ಮಿಸಲಾಗಿದೆ. ಉಳಿದ ತಾಂಡಾಗಳಲ್ಲಿ ಸಿ.ಸಿ. ರಸ್ತೆಯ ನಿರ್ಮಾಣ ಮಾಡಿರುವುದಿಲ್ಲ.

2) ಈ ರಸ್ತೆಯನ್ನು 2002–03ನೇ ಸಾಲಿನಲ್ಲಿ ಕೈಗೊಳ್ಳಲಾಗಿದ್ದು, ರೂ. 0.946 ಲಕ್ಷ ಖರ್ಚಾಗಿರುತ್ತದೆ. ಕಾಮಗಾರಿಯ ವಿವರ ಈ ಕೆಳಗಿನಂತಿವೆ:

1. ರಸ್ತೆ ಫಾರ್ಮೇಶನ್‌ಗಾಗಿ ಮತ್ತು ಚರಂಡಿಗಾಗಿ ಮಣ್ಣು ಕೆಲಸ 100 ಮೀ. ಉದ್ದದವರೆಗೆ.
2. ರಸ್ತೆಯ 50 ಮೀ. ಉದ್ದದವರೆಗೆ ಗ್ರೇಡ್–2 ಜಲ್ಲಿ ಹರಡಿಸಿ ಗಟ್ಟನೆ ಮಾಡುವುದು.
3. ಈ ಗಟ್ಟನೆ ಮಾಡಿದ ಜೆಲ್ಲಿಯ ಮೇಲೆ ಸೀಮೆಂಟ್ ಕಾಂಕ್ರೀಟ್ 1:2:4 ವೇರಿಂಗ್ ಕೋಟ್ ಮತ್ತು ಹಾಲಿ ಇದ್ದ 50 ಮೀ. ಉದ್ದ ಹಾಸಿನ ಮೇಲೆ ಸಿಸಿ 1:2:4 ಪ್ರಮಾಣ ವೇರಿಂಗ್ ಕೋಟ್ ಹೀಗೆ ಒಟ್ಟಾರೆ 100 ಮೀ. ಉದ್ದ ಸಿಸಿ ರಸ್ತೆ ಕೆಲಸ ಮಾಡುವುದು.

3. ಸದ್ಯರಿ ರಸ್ತೆಯು ಸುಸ್ಥಿತಿಯಲ್ಲಿದೆ. ಯಾರ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.